ಶ್ರೀ ಡಿ.ಎ. ಸದಾನಂದಗೌಡ : ನಾವು ಹೇಳಿದ್ದನ್ನು ಕೇಳಲು ಸರ್ಕಾರಕ್ಕೆ ಮನಸ್ಸಿಲ್ಲವೆಂದರೆ, ನಾವೇನೂ ಮಾಡಲು ಆಗುವುದಿಲ್ಲ. ಮಾನ್ಯ ಸಿಂಧ್ಯಾರವರು ಹೇಳಿರುವ ಸತ್ಯ ಸಂಗತಿಗಳನ್ನು ಏಕೆ ಕಡತದಿಂದ ತೆಗೆಯಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರಕ್ಕೆ ಕೇಳುವುದಕ್ಕೆ ಮನಸ್ಸಿಲ್ಲಾ ಹೇಳುವುದಕ್ಕೆ ಮನಸ್ಸಿಲ್ಲಾ ಎಂದು ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು, ಅದನ್ನು ನಿಯಮದ ವ್ಯಾಪ್ತಿಯೊಳಗೆ ತಾವು ಅಲೋ ಮಾಡಿದ್ದೀರಿ. ಸಹಿಯನ್ನೂ ಹಾಕುವಂತಿಲ್ಲ, ನೋಟೀಸನ್ನೂ ಕಳಿಸುವಂತಿಲ್ಲ, ಎದ್ದು ನಿಂತು ಸರ್ಕಾರದ ವಿರುದ್ಧ ಚಾರ್ಜ್ ಮಾಡುತ್ತಾ ಹೋಗುವುದು, ಅದು ಕಡತದಲ್ಲಿ ಉಳಿಯುವುದು, ಉತ್ತರ ಹೇಳುವುದಕ್ಕೆ ನಾವು ಈಗ ತಯಾರಾಗಿಲ್ಲ, ಅಥವಾ ತಾವು ಅವಕಾಶ ಕೊಡುವುದಿಲ್ಲ, ಹಾಗಿದ್ದರೆ ನಾವು ಸದನ ನಡೆಸುವುದು ಹೇಗೆ? He should have given a notice. I would have come prepared for reply. ಅವರೇನು ಹೇಳಿದ್ದಾರೆ ಅದಕ್ಕೆ ಉತ್ತರ ಕೊಡಬೇಕಾದರೆ ತಾವು ನಮಗೆ ಅವಕಾಶ ಕೊಡಬೇಕು. ಈ ಸದನದಲ್ಲಿ ಏನು ನಡೆಯುತ್ತಿದೆ? Is it the way that we run the House.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನೇನು ಭಾಷಣ ಮಾಡುತ್ತೇನೆ ಎಂಬುದನ್ನು ಪ್ರಿಂಟ್ ಮಾಡಿಬಿಟ್ಟು ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ ಬಿಡಿ!

ಅಧ್ಯಕ್ಷರು : ಅದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಹೇಗಾದರೂ ತೆಗೆದುಕೊಳ್ಳಿ., ನಾನು ಕೇಳುವುದು ಇಷ್ಟೇ, ಈ ಸದನ ನಿಯಮದಂತೆ ನಡೆಯಬೇಕು, ನಿಯಮದಲ್ಲಿ ಇಲ್ಲಿ ಯಾರ್ಯಾರು ಸಹಿ ಮಾಡಿ ನೋಟೀಸ್ ಕೊಟ್ಟಿದ್ದಾರೋ ಅವರು ಮಾತ್ರ ಮಾತನಾಡಲು ಸ್ವಾತಂತ್ರ್ಯ ಇದೆ, ಹಕ್ಕೂ ಇದೆ, ಉತ್ತರ ಕೊಡಬೇಕಾದ ಜವಾಬ್ದಾರಿಯೂ ಸರ್ಕಾರದ್ದಿದೆ. ಆದರೆ ಇಲ್ಲಿ ನೋಟೀಸ್ ಕೊಡುವಂತಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟ ನೋಟೀಸ್‌ಗೆ ಉಳಿದವರೆಲ್ಲಾ ಎದ್ದು ಚರ್ಚೆ ಮಾಡುವುದು; ಈ ರೀತಿ ಸದನ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರಕ್ಕೆ You must allow freely to reply.

ಅಧ್ಯಕ್ಷರು : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಪ್ರಸ್ತಾಪ ಮಾಡಿ. ಇದು ಬೇರೆ ವಿಚಾರ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಡೆಂಗ್ಯೂ ಜ್ವರದ ಸಮಸ್ಯೆ

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಡೆಂಗ್ಯೂ ಜ್ವರದ ಸಮಸ್ಯೆ ಇದೆ. ಅದರಿಂದ ಹಲವಾರು ಜನರು ಈಗಾಗಲೇ ಸತ್ತಿದ್ದಾರೆ. ರಕ್ತವನ್ನು ಪರೀಕ್ಷೆ ಮಾಡತಕ್ಕಂಥ ಯೂನಿಟ್‌ನ್ನು ಸುಳ್ಯದಲ್ಲಿ ಇಟ್ಟಿಲ್ಲ. ಬೆಂಗಳೂರಿನಿಂದ ತೆಗೆದುಕೊಂಡು ಹೋಗಿ ಮಂಗಳೂರಿನಲ್ಲಿಟ್ಟಿದ್ದಾರೆ. ಅದನ್ನು ಸುಳ್ಯದಲ್ಲಿ ಇಟ್ಟರೆ ತಕ್ಷಣದಲ್ಲಿ ರಕ್ತದ ಸ್ಯಾಂಪಲ್‌ನ್ನು ಪರೀಕ್ಷೆ ಮಾಡಿ ಟ್ರೀಟ್‌ಮೆಂಟ್ ಪ್ರಾರಂಭಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಆರೋಗ್ಯ ಸಚಿವರ ಪತ್ರವನ್ನು ಈಗಾಗಲೇ ತಾವು ಕಳುಹಿಸಿದ್ದೀರಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.